ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಅಲ್ಲಿ ಎಲೆಚೆರಿ ಜಾತಿಗೆ ಎಷ್ಟು ಪ್ರದೇಶ ಕೊಟ್ಟಿದ್ದಾರೆ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

1 P. M.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈಗ ಆ ಜಮೀನಿನಲ್ಲಿ 20 ಗುಂಟೆ ಪ್ರದೇಶವನ್ನು ಒಂದು ಥಿಯೇಟರಿಗಾಗಿ ಕೊಟ್ಟಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಇಷ್ಟೆಲ್ಲಾ ಕೊಟ್ಟಿದ್ದರೂ 80 ಜನ ಹರಿಜನರು ಅಲ್ಲಿ ಹಾಕಿಕೊಂಡಿರುವ 80 ಹುಲ್ಲು ಮನೆಗಳನ್ನು ಬದಲಾಯಿಸಲು ಮುನಿಸಿಪಾಲಿಟಿಯವರು ಲೈಸನ್ಸ್ ಕೊಡದೆ ಅಡ್ಡಿಪಡಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಈ ಹಿಂದೆಯೂ ಈ ವಿಚಾರ ಸರ್ಕಾರದವರ ಗಮನಕ್ಕೆ ಬಂದಿತ್ತು. ನಾನು ಕೂಡ ಆ ಸ್ಥಳಕ್ಕೆ ಭೇಟಿಕೊಟ್ಟು ಎಲ್ಲವನ್ನೂ ನೋಡಿಕೊಂಡು ಬಂದಿದ್ದೇನೆ. ಆ ಬಗ್ಗೆ ಈಗ ಸರ್ಕಾರದವರು ತೀವ್ರವಾಗಿ ಆಲೋಚನೆಮಾಡುತ್ತಿದ್ದಾರೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಸ್ಪೆಷಲ್ ಆಫೀಸರ ಮುತ್ತು ಆಮಲ್ದಾರರ ಮೂಲಕ ಈ ಜಮೀನುಗಳನ್ನು ಈಗ ಮಳೆಗಾಲ ಸಮೀಪಿಸುತ್ತಿರುವುದರಿಂದ ಬೇಗ ಹಂಚಿಕೆಮಾಡುವಂತೆ ಏರ್ಪಾಡುಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಆ ವಿಚಾರ ಈಗ ಸರ್ಕಾರದವರ ತೀವ್ರ ಪರ್ಯಾಲೋಚನೆಯಲ್ಲಿರುತ್ತದೆಂದು ಆಗಲೇ ತಿಳಿಸಿದ್ದೇನೆ.

Amrit Mahal Kaval of Nagegowdanabyala.

Q.—654. Sri C. M. ANNAYYAPPA (Gubbi).—

Will the Government be pleased to state:—

(*a*) when the Amrit Mahal Kaval of Nagegowdanabyala, Turuvekere Taluk, Tumkur District, was resumed by the Forest Department; the object behind it;

(*b*) the number of trees raised on the said area so far by the department; the income to the Government from the said area; and the income that may be expected in future;

(*c*) whether the villagers of Kallur Kallahalli of Kadaba Hobli, Gubbi Taluk, have made any representation to Government about their intention to form a model village in the said kaval; if so, when; the reply given to the villagers by them in this respect?

A.—Sri T. CHANNIAH (Minister for Public Health and Local Self-Government).—

(*a*) 15th May 1941.

The object of constituting the area as a State Forest was to preserve Forest Wealth and to increase the Forest Area by afforestation to ultimately afford to the raiyats of the villages surrounding the block, grazing facilities and agricultural needs.

(*b*) Information regarding the number of trees raised on the area is not available. No separate account of Revenue from this area is available.

(*c*) Yes. In December 1952.

The matter is under consideration.

ಶ್ರೀ ಸಿ. ಎಂ. ಅಣ್ಣಯ್ಯಪ್ಪ.—ಅಲ್ಲಿ ಎಷ್ಟು ಗಿಡಗಳನ್ನು ನೆಟ್ಟಿದ್ದಾರೆಂಬ ವಿವರಗಳು ದೊರೆಯಲು ಅವಕಾಶವಿದೆಯೇ?

ಶ್ರೀ ಟಿ. ಚನ್ನಯ್ಯ.—ಗಿಡಗಳನ್ನೇನೋ ನೆಟ್ಟಿದ್ದಾರೆ. ಎಷ್ಟು ಎಂಬ ವಿವರಗಳು ಸದ್ಯಕ್ಕೆ ನನ್ನಲ್ಲಿಲ್ಲ.

ಶ್ರೀ ಸಿ. ಎಂ. ಅಣ್ಣಯ್ಯಪ್ಪ.—ನನ್ನ (ಬಿ) ಪ್ರಶ್ನೆಗೆ ಒದಗಿಸಿರುವ ಉತ್ತರದಲ್ಲಿ 'ವಿವರಗಳು ದೊರೆಯುವಂತಿಲ್ಲ' ಎಂದು ತಿಳಿಸಲಾಗಿದೆ. ಆದರೆ ಅಲ್ಲಿ ಹಾಗೆ ಒಂದು ಗಿಡವನ್ನೂ ನೆಟ್ಟಿಲ್ಲವೆಂದು ಹೇಳಿದರೆ ತಾವು ಅದನ್ನು ಒಪ್ಪುತ್ತೀರಾ?

ಶ್ರೀ ಟಿ. ಚನ್ನಯ್ಯ.—ಸರ್ಕಾರಕ್ಕೆ ಬಂದಿರತಕ್ಕ ವರದಿಯಲ್ಲಿ ಅರೀತಿಯಾಗಿ ತಿಳಿಸಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಸಾಮಾನ್ಯವಾಗಿ ಫಾರೆಸ್ಟ್‌ಗಳಿಂದ ಬರುತ್ತಿರುವ ವರಮಾನ ಕಮ್ಮಿಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಚನ್ನಯ್ಯ.—ಬಂದಿದೆ.

ಶ್ರೀ ಎಸ್. ಸಿದ್ದಪ್ಪ.—ಈ ಫಾರೆಸ್ಟ್ ಉತ್ಪತ್ತಿಯನ್ನು ಹೆಚ್ಚಿಸಲು ತಾವು ಸಂಸ್ಥಾನಾವಳಿ ಎಷ್ಟುಕಡೆ ಈ ಜಂಗಲ್ ಅಭಿವೃದ್ಧಿ ಕಾರ್ಯಗಳನ್ನು ನಡೆಸಲಾಗುತ್ತಿದೆ?

ಶ್ರೀ ಟಿ. ಚನ್ನಯ್ಯ.—ಸರ್ಕಾರದವರು ಪಾಂಚವಾರ್ಷಿಕ ಯೋಜನೆಗೆ ಅನುಸಾರವಾಗಿ ಮರಗಿಡಗಳನ್ನು ಬೆಳೆಸಲು ಏರ್ಪಾಡುಮಾಡಿದ್ದಾರೆ. ಈ ಯೋಜನೆಯೆಲ್ಲ ಮರೆನಾಡಿಗೇ ಹೆಚ್ಚಿಗೆ ಅನ್ವಯಿಸತಕ್ಕದ್ದಾಗಿದೆ. ಅಲ್ಲಿ ಪ್ರತಿ ವರ್ಷವೂ ಹತ್ತು ಸಾವಿರ ಗಿಡಗಳನ್ನು ಬೆಳೆಸಬೇಕೆಂದು ಗೊತ್ತುಮಾಡಿರುತ್ತದೆ.

Landless Families of Depressed Classes.

Q.—18. Sri T. HANUMAIAH (Hiriyur—Scheduled Castes).—

Will the Government be pleased to state:—

(*a*) the number of Depressed Class families in the State (District